**ಕರ್ನಾಟಕ ವಿಧಾನ ಪರಿಷತ್ತು**

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 603+604 |
| ಸದಸ್ಯರ ಹೆಸರು | : | ಶ್ರೀ ಸುನೀಲ್‌ಗೌಡ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 11.03.2025 |
| ಉತ್ತರಿಸಬೇಕಾದ ಸಚಿವರು | : | ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು. |

| | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಮಹಾನಗರ ಪಾಲಿಕೆಗಳಲ್ಲಿ ಬಹಳ ವರ್ಷಗಳಿಂದ ಆಸ್ತಿ ತೆರಿಗೆ ಪಾವತಿಸದೇ ಕರ ಬಾಕಿದಾರರು ಬಹಳಷ್ಟಿದ್ದು; ತೆರಿಗೆದಾರರಿಗೆ ವಿಧಿಸಲಾಗುತ್ತಿರುವ ಬಡ್ಡಿ ಹಾಗೂ ಆಸ್ತಿ ತೆರಿಗೆಯಿಂದ ತೀವ್ರ ಆರ್ಥಿಕ ಹೊರೆಯಾಗಿ ತೆರಿಗೆ ಪಾವತಿಸದ ಮಹಾನಗರ ಪಾಲಿಕೆಗಳು ಆದಾಯವಿಲ್ಲದೇ ಸಂಕಷ್ಟದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ ತೆರಿಗೆ ಸಂಗ್ರಹಣೆಯನ್ನು ವಸೂಲಿ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು; | ಕರ್ನಾಟಕ ಪೌರನಿಗಮಗಳ ಅಧಿನಿಯಮ 1976 ರ ಪ್ರಕರಣ 103 ರನ್ವಯ ರಾಜ್ಯದಲ್ಲಿ (ಬಿ.ಬಿ.ಎಂ.ಪಿ. ಹೊರತುಪಡಿಸಿ) ಮಹಾನಗರ ಪಾಲಿಕೆಗಳು ಆಸ್ತಿಗಳಿಗೆ ಆಸ್ತಿ ತೆರಿಗೆ ನಿರ್ಧರಣೆ ಮಾಡಲು ಅವಕಾಶವಿದ್ದು, ಅದರಂತೆ, ಆಸ್ತಿ ತೆರಿಗೆಯನ್ನು ವಿಧಿಸಲಾಗುತ್ತಿದೆ.<br>ಆಸ್ತಿ ತೆರಿಗೆ ಪಾವತಿಸುವುದನ್ನು ಪ್ರೋತ್ಸಾಹಿಸಲು ಚಾಲ್ತಿ ಸಾಲಿನ ಆಸ್ತಿ ತೆರಿಗೆಯನ್ನು ಆರ್ಥಿಕ ವರ್ಷದ ಏಪ್ರಿಲ್ ತಿಂಗಳಲ್ಲಿ ಪಾವತಿ ಮಾಡಿದ್ದಲ್ಲಿ, ಶೇ.5ರಷ್ಟು ತೆರಿಗೆ ರಿಯಾಯಿತಿಯನ್ನು ನೀಡುತ್ತಾ ಬಂದಿದ್ದು, ಸದರಿ ರಿಯಾಯಿತಿಯನ್ನು 2024-25 ನೇ ಆರ್ಥಿಕ ವರ್ಷದ ಸೆಪ್ಟೆಂಬರ್-2024 ರವರೆಗೆ ಸರ್ಕಾರದ ಆದೇಶ ಸಂಖ್ಯೆ: ನಅಇ 119 ಜಿಇಎಲ್ 2024, ದಿನಾಂಕ: 28.08.2024ರಲ್ಲಿ ವಿಸ್ತರಿಸಿ ಆದೇಶಿಸಲಾಗಿರುತ್ತದೆ.<br>ಅಲ್ಲದೆ, ಹಿಂದಿನ ವರ್ಷಗಳ ಬಾಕಿಯನ್ನು ವಸೂಲಿ ಮಾಡಲು ಸರ್ಕಾರದ ಆದೇಶ ಸಂಖ್ಯೆ:ನಅಇ 18 ಜಿಇಎಲ್ 2024(ಇ), ದಿನಾಂಕ:27.06.2024 ರನ್ವಯ ಸ್ವಸಹಾಯ ಸಂಘಗಳನ್ನು ತೊಡಗಿಸಿಕೊಂಡು ಆಸ್ತಿ ತೆರಿಗೆಯನ್ನು ವಸೂಲಿ ಮಾಡಲಾಗುತ್ತಿದೆ. ಅಲ್ಲದೇ, ಆನ್ ಲೈನ್ ಮೂಲಕವು ಸಹ ಪಾವತಿಸಲು ಅವಕಾಶ ಕಲ್ಪಿಸಲಾಗಿರುತ್ತದೆ. |
| ಆ) | ರಾಜ್ಯದ ಮಹಾನಗರ ಪಾಲಿಕೆಗಳಿಂದ ಬರತಕ್ಕ ಒಟ್ಟು ತೆರಿಗೆ ಬೇಡಿಕೆ ಎಷ್ಟು; ವಸೂಲಿಯಾದ ತೆರಿಗೆ ಮತ್ತು ಬಾಕಿ ತೆರಿಗೆ ಎಷ್ಟು; (ಮಹಾನಗರ ಪಾಲಿಕೆವಾರು ವಿವರವಾದ ಮಾಹಿತಿ ನೀಡುವುದು) | ರಾಜ್ಯದ ಮಹಾನಗರ ಪಾಲಿಕೆಗಳಿಂದ ಬರತಕ್ಕಂತ ಒಟ್ಟು ತೆರಿಗೆ ಬೇಡಿಕೆ, ತೆರಿಗೆ ವಸೂಲಿ, ಬಾಕಿ ತೆರಿಗೆಯ ಮಾಹಿತಿ ಈ ಕೆಳಕಂಡಂತಿದೆ.<br>ರೂ. ಕೋಟಿಗಳಲ್ಲಿ<br><br>**ವರ್ಷ** \| **ಬೇಡಿಕೆ** \| **ವಸೂಲಾತಿ** \| **ಬಾಕಿ ತೆರಿಗೆ** \| **ಶೇಕಡಾವಾರು ವಸೂಲಾತಿ**<br>2023-24 \| 800.63 \| 687.64 \| 112.98 \| 85.89%<br>2024-25 \| 912.52 \| 764.66 \| 147.85 \| 83.80 %<br><br>ಮಹಾನಗರ ಪಾಲಿಕೆವಾರು ವಿವರವಾದ ಮಾಹಿತಿಯನ್ನು **ಅನುಬಂಧದಲ್ಲಿ** ನೀಡಿದೆ. |
| ಇ) | ಆಸ್ತಿ ತೆರಿಗೆ ಸಂಗ್ರಹಣೆಯನ್ನು ಸರಳೀಕರಿಸುವ ನಿಟ್ಟಿನಲ್ಲಿ ಬಿ.ಬಿ.ಎಂ.ಪಿ. ಮಾದರಿಯಲ್ಲಿ ಒಂದು ಬಾರಿ ಪರಿಹಾರ (OTS) ಯೋಜನೆಯನ್ನು ಇತರೆ ಮಹಾನಗರ ಪಾಲಿಕೆಗಳಲ್ಲಿ ಜಾರಿಗೊಳಿಸುವ ಪ್ರಸ್ತಾವನೆಯು ಸರ್ಕಾರದ ಹಂತದಲ್ಲಿದೆಯೇ; ಈ ಕುರಿತು ಸರ್ಕಾರದ ಸ್ಪಷ್ಟ ನಿಲುವೇನು; | ರಾಜ್ಯದ ಮಹಾನಗರ ಪಾಲಿಕೆಗಳಲ್ಲಿ (ಬಿ.ಬಿ.ಎಂ.ಪಿ. ಹೊರತುಪಡಿಸಿ) ಆಸ್ತಿ ತೆರಿಗೆಯ ಒಟ್ಟು ಬೇಡಿಕೆಯ ಶೇ.83.80 ರಷ್ಟು ವಸೂಲಾತಿಯಾಗಿದ್ದು, ಇದರಿಂದ ಮಹಾನಗರ ಪಾಲಿಕೆಗಳಿಗೆ ಯಾವುದೇ ನಷ್ಟವಾಗಿರುವುದಿಲ್ಲ, ಹಾಗಾಗಿ ಒಂದು ಬಾರಿ ಪರಿಹಾರ (OTS) ಯೋಜನೆಯನ್ನು ಮಹಾನಗರ ಪಾಲಿಕೆಗಳಲ್ಲಿ ಜಾರಿಗೊಳಿಸುವ ಪ್ರಸ್ತಾವನೆಯು ಸರ್ಕಾರದ ಮುಂದಿರುವುದಿಲ್ಲ. |

**ಸಂಖ್ಯೆ: ನಅಇ 82 ಎಂಎನ್ಇ 2025 (ಇ)**

**(ಬಿ.ಎಸ್. ಸುರೇಶ)**
ನಗರಾಭಿವೃದ್ಧಿ ಹಾಗೂ ನಗರ ಯೋಜನೆ ಸಚಿವರು

ಅನುಬಂಧ-1

## LCQ ( 603+604 ) Starred

## Property Tax DCB (City Corporation)

Rs. In Crores

| SL.No | Dist Name | ULB Name | ULB Type | 2024-25 (Upto 28.02.2025) | | | | | |
|---|---|---|---|---|---|---|---|---|---|
| | | | | OB | Demand | Total Demand | Collection | Balance | Percentage |
| 1 | 2 | 3 | 4 | 5 | 6 | 7 | 8 | 9 | 10 |
| 1 | Kalaburagi | Kalaburagi | CC | 34.09 | 23.16 | 57.25 | 37.99 | 19.26 | 66.36 |
| 2 | Mysuru | Mysuru | CC | 30.73 | 220.69 | 251.42 | 208.64 | 42.78 | 82.99 |
| 3 | Ballari | Ballari | CC | 1.64 | 46.54 | 48.18 | 36.05 | 12.14 | 74.81 |
| 4 | Dharwada | Hubli Dharwad | CC | 17.91 | 123.26 | 141.17 | 108.20 | 32.97 | 76.65 |
| 5 | Belagavi | Belagavi | CC | 7.42 | 73.50 | 80.92 | 65.95 | 14.97 | 81.50 |
| 6 | Dakshina kannada | Mangaluru | CC | 5.89 | 102.11 | 108.00 | 103.64 | 4.36 | 95.96 |
| 7 | Tumakuru | Tumakuru | CC | 14.27 | 58.27 | 72.54 | 56.87 | 15.67 | 78.40 |
| 8 | Vijayapura | Bijapur Bijapur | CC | 3.09 | 36.81 | 39.91 | 30.91 | 9.00 | 77.45 |
| 9 | Davanagere | Davanagere | CC | 0.00 | 40.73 | 40.73 | 47.64 | -6.91 | 116.97 |
| 10 | Shivamogga | Shivamogga | CC | 4.46 | 46.75 | 51.21 | 48.88 | 2.33 | 95.45 |
| 11 | Raichuru | Raichuru | CC | 0.9 | 20.29 | 21.19 | 19.9 | 1.29 | 93.91 |
| | **Total** | | | **120.41** | **792.11** | **912.52** | **764.66** | **147.85** | **83.80** |

ಸಹಾಯಕ ನಿರ್ದೇಶಕರು (ಅಭಿವೃದ್ಧಿ)
ಪೌರಾಡಳಿತ ನಿರ್ದೇಶನಾಲಯ
ಬೆಂಗಳೂರು

## Property Tax DCB (City Corpor

| SL.No | Dist Name | ULB Name | 2023-24 | | | | | |
|---|---|---|---|---|---|---|---|---|
| | | | OB | Demand | Total Demand | Collection | Balance | Percentage |
| 1 | 2 | 3 | 5 | 6 | 7 | 8 | 9 | 10 |
| 1 | Kalaburagi | Kalaburagi | 40.31 | 33.95 | 74.26 | 37.21 | 37.05 | 50.11 |
| 2 | Mysuru | Mysuru | 34.41 | 180.15 | 214.56 | 183.83 | 30.73 | 85.68 |
| 3 | Ballari | Ballari | 3.74 | 32.77 | 36.51 | 34.87 | 1.64 | 95.51 |
| 4 | Dharwada | Hubli Dharwad | 30.64 | 104.91 | 135.55 | 117.64 | 17.91 | 86.78 |
| 5 | Belagavi | Belagavi | 4.07 | 57.93 | 62.00 | 54.58 | 7.42 | 88.03 |
| 6 | Dakshina kannada | Mangaluru | 8.42 | 91.41 | 99.84 | 93.94 | 5.89 | 94.10 |
| 7 | Tumakuru | Tumakuru | 12.45 | 44.27 | 56.72 | 42.46 | 14.27 | 74.85 |
| 8 | Vijayapura | Bijapur | 2.01 | 31.24 | 33.25 | 30.15 | 3.09 | 90.69 |
| 9 | Davanagere | Davanagere | 5.28 | 31.35 | 36.63 | 42.12 | -5.48 | 114.97 |
| 10 | Shivamogga | Shivamogga | 6.30 | 45.00 | 51.30 | 50.84 | 0.46 | 99.10 |
| | **Total** | | **147.64** | **652.98** | **800.63** | **687.64** | **112.98** | **85.89** |